ಹೊಸ ಬಟ್ಟೆ ಇದೆ. ಯಾವುದು ಬೇಕು ಎಂದಳು. ಚೆಲುವಮ್ಮ ಹಳೆಬಟ್ಟೆ ಎಂದಳು. ಅಜ್ಜಿ ಜರತಾರಿಯ ಹೊಸಬಟ್ಟೆ ಕೊಟ್ಟಳು.

ಅದಾದ ಮೇಲೆ ಹಳೆ ಮತ್ತು ಹೊಸಪೆಟ್ಟಿಗೆಗಳಿವೆ ಯಾವುದು ಬೇಕು ಎಂದಳು. ಚೆಲುವಮ್ಮ ಹಳೆ ಪೆಟ್ಟಿಗೆ ಕೊಡಿ ಎನ್ನಲು, ಅಜ್ಜಿ ಹೊಸ ಪೆಟ್ಟಿಗೆ ಕೊಟ್ಟಳು. ಅದರಲ್ಲಿ ಚಿನ್ನದ ಓಲೆ, ಜುಮುಕಿ, ಬಳೆ, ಕಾಸಿನ ಸರ, ಡಾಬು, ಬೆಳ್ಳಿಯ ಕಾಲು ಚೈನು ಮುಂತಾದ ಒಡವೆಗಳಿದ್ದವು. ಅಜ್ಜಿ ಅವುಗಳನ್ನೆಲ್ಲ ಹಾಕಿಕೊಳ್ಳಲು ಹೇಳಿದಳು. ಚೆಲುವಮ್ಮ ಹೊಸ ಉಡುಗೆ ಒಡವೆಯಲ್ಲಿ ಸುಂದರವಾಗಿ ಕಂಗೊಳಿಸಿದಳು.

ಅಜ್ಜಿಯು ಚೆಲುವಮ್ಮನಿಗೆ ಚಿನ್ನದ ಸೂಜಿ ತೋರಿಸಿ ತೆಗೆದುಕೋ ನಿನ್ನ ಸೂಜಿ ಎಂದಳು. ಚೆಲುವಮ್ಮ ಅದು ನನ್ನದಲ್ಲ, ಬೇಡ ಎಂದಳು. ಅಜ್ಜಿ ಒಂದು ಬೆಳ್ಳಿ ಸೂಜಿ ತೋರಿಸಿದಳು. ಅದು ನನ್ನದಲ್ಲ, ಬೇಡ ಎಂದಳು. ಅಜ್ಜಿ ಒಂದು ಕಬ್ಬಿಣದ ಸೂಜಿ ತೋರಿಸಿದಳು. ಚೆಲುವಮ್ಮ ಅದು ನನ್ನದು, ನನಗೆ ಬೇಕು ಎಂದು ಕೈ ನೀಡಿದಳು.

ಅಜ್ಜಿ ಅವಳಿಗೆ ಆ ಮೂರೂ ಸೂಜಿಗಳನ್ನು ಕೊಟ್ಟು ತುರುಬಿಗೆ ಚುಚ್ಚಿಕೊ ಎಂದಳು. ಅವಳು ಚುಚ್ಚಿಕೊಂಡ ತಕ್ಷಣ ಅವು ಚಿನ್ನ, ಬೆಳ್ಳಿ, ವಜ್ರದ ಹೊಳೆಯುವ ಹೂಗಳಾದವು. ಅಜ್ಜಿ ಆ ಮನೋಹರ ಚೆಲುವಮ್ಮನನ್ನು ಎರಡೂ ಕೈಗಳಿಂದ ನೀವಾಳಿಸಿ ದೃಷ್ಟಿತೆಗೆದು ಔತಣ ನೀಡಿ ಸಂತೋಷಪಡಿಸಿದಳು.

ಚೆಲುವಮ್ಮ ಜಗಮಗಿಸುವ ಉಡುಪು ಒಡವೆಗಳೊಂದಿಗೆ ಹಿಂದಿರುಗುವಾಗ ಅವಳನ್ನು ಕಂಡ ಇರುವೆಗಳು ಓಡಿ ಬಂದವು. ನೀನು ನಮ್ಮ ಹಸಿವು ದೂರ ಮಾಡಿದ ತಾಯಿ. ನಿನಗೆ ನಾವು ಲಾಡು, ಜಿಲೇಬಿ, ಚಿರೋಟಿ ಮಾಡಿ ತಂದಿದ್ದೇವೆ ತೆಗೆದುಕೊ ಎಂದು ನೀಡಿದವು.

ಚೆಲುವಮ್ಮ ಹಾಗೆ ಮುಂದೆ ಸಾಗುತ್ತಿರಲು ಗುಲಾಬಿ ತೋಟದ ಹೂಗಳು ನಳನಳಿಸಿ, ಕಂಪುಬೀರಿ ನೀನು ನಮಗೆ ಜೀವ ಉಳಿಸಿದ ತಾಯಿ ಎಂದು ಅವಳನ್ನು ಅಲಂಕರಿಸಿದವು. ಚೆಲುವಮ್ಮ ಇನ್ನೂ ಸ್ವಲ್ಪ ಮುಂದೆ ಬರಲು ಆನೆ ಗಂಭೀರ ಹೆಜ್ಜೆ ಇಡುತ್ತ ಬಂದಿತು. ನನ್ನನ್ನು ಮತ್ತೆ ನಡೆಯುವಂತೆ ಮಾಡಿದ ತಾಯಿ ಎಂದು ಹೇಳಿ ಸೊಂಡಿಲಿನಿಂದ ನಮಸ್ಕರಿಸಿ, ಮಂಡಿಯೂರಿ ತನ್ನ ಮೇಲೆ ಕುಳಿತುಕೊಳ್ಳಲು ಹೇಳಿ, ಅವಳನ್ನು ಹೊತ್ತು ಮುಂದೆ ಸಾಗಿತು.

ಎದುರಿಗೆ ಕುದುರೆ ಏರಿ ಆ ನಾಡಿನ ರಾಜಕುಮಾರ ಬರುತ್ತಿದ್ದ. ಆನೆಯ ಮೇಲೆ ಕುಳಿತು ಬರುತ್ತಿದ್ದ ಪರಮಸುಂದರಿ ಚೆಲುವಮ್ಮನನ್ನು ನೋಡಿದ. ಅವಳ ಉಡುಪು, ಗುಲಾಬಿಯ ಕಂಪಿಗೆ ಮನಸೋತು ಅವಳನ್ನು ವಿವಾಹವಾದ. ಚೆಲುವಮ್ಮ ಅವನೊಡನೆ ಅರಮನೆಯಲ್ಲಿ ಸುಖದಿಂದಿದ್ದಳು.

(ನನ್ನ ತಾಯಿ ಹೇಳಿದ ಕಥೆ)

# ಆಹಾ ಎಂಥಾ ಸೊಗಸು

■ **ಡಾ. ಕೆ.ಬಿ. ರಂಗಸ್ವಾಮಿ**
ಕಲೆ: ಸಂತೋಷ್ ಸಸಿಹಿತ್ಲು

ಆಹಾ ಎಂಥಾ ಸೊಗಸು
ನಸುಕಿನ ಜಾವದ ಸುಂದರ ನಿದ್ರೆ
ಸಿಹಿತಿನಿಸೊಂದನು ಚಪ್ಪರಿಸುವಂಥ
ಸವಿಗನಸೊಂದು ಬಿದ್ರೆ!

ಅಮ್ಮನ ಮಡಿಲಲಿ ಬೆಚ್ಚಗೆ ಮಲಗಿ
ಆಕೆಯ ಜೋಗುಳ ಕೇಳುವ ಕನಸು
ಅಕ್ಕನ ಸೊಂಟದ ಮೇಗಡೆ ಕುಳಿತು
ಬೆಳ್ಳಕ್ಕಿ ಹಿಂಡನು ಕರೆಯುವ ಕನಸು

ಹಕ್ಕಿಯ ತೆರದಲಿ ಬಾನಿಗೆ ಚಿಮ್ಮಿ
ಚಂದ್ರನ ಕೆನ್ನೆಗೆ ಮುತ್ತಿಕ್ಕೋ ಕನಸು
ತಾರಾಬಳಗದ ಜೊತೆಯಲಿ ಹರಟುತಾ
ಚಕ್ಕುಲಿ ಉಂಡೆಯ ಸವಿಯುವ ಕನಸು

ಢಣಢಣ ಢಣಢಣ ಘಂಟೆಯು ಬಾರಿಸಿ
ಶಾಲೆಯ ಹೊರಗಡೆ ಓಡುವ ಕನಸು
ಅಪ್ಪನ ಒರಟು ಬೆರಳನು ಹಿಡಿದು
ಸಂತೆ ಪೇಟೆಯ ಸುತ್ತುವ ಕನಸು

ಬೆಟ್ಟ ಗುಡ್ಡ ಹೊಳೆ ಕೆರೆ ಅಲೆಯುತಾ
ಗೆಳೆಯರ ಜೊತೆಗಿನ ಜಗಳದ ಕನಸು
ಪರೀಕ್ಷೆ ಪಾಠದ ಗೊಡವೆಯೇ ಇಲ್ಲದೆ
ಮುಂದಿನ ಕ್ಲಾಸಿಗೆ ಜಿಗಿಯುವ ಕನಸು

ಆಹಾ ಎಂಥಾ ಸೊಗಸು
ನಸುಕಿನ ಜಾವದ ಸುಂದರ ನಿದ್ರೆ
ಸಿಹಿತಿನಿಸೊಂದನು ಚಪ್ಪರಿಸುವಂಥ
ಸವಿಗನಸೊಂದು ಬಿದ್ರೆ!



## ಕುಂಚ ಪ್ರಪಂಚ





**ರಿದಮ ರೋಹನ ಜೋಷಿ**
9ನೇ ತರಗತಿ,
ಕೇಂದ್ರಿಯ ವಿದ್ಯಾಲಯ
ಸಿ.ವಿ.ರಾಮನ್ ನಗರ,
ಬೆಂಗಳೂರು





**ಅವಾನಿ ಎ. ಶರ್ಮ**
ಯುಕೆಜಿ,
ನ್ಯಾಷನಲ್ ಪಬ್ಲಿಕ್ ಸ್ಕೂಲ್
ಚಿಕ್ಕಬಾಣಾವರ